(₹ ಲಕ್ಷಗಳಲ್ಲಿ)

ವರ್ಷ	ಟಿ.ಟಿ.ಎಂ.ಸಿ			ಬಸ್ಸುಗಳು		
	ಕೇಂದ್ರ	ರಾಜ್ಯ	ಒಟ್ಟು	ಕೇಂದ್ರ	ರಾಜ್ಯ	ಒಟ್ಟು
2006-07	31 13	13 34	44 47			
2007-08	1122 71	481 17	1603 88			
2008-09	1759 32	754 22	2513 54	4116 00	0 00	4116 00
2009-10	2811 39	1204 85	4016 24	1565 00	2434 00	3999 00
2010-11	2845 52	2165 29	5010 81	2652 00	1136 57	3788 57
2011-12	2614 61	284 05	2898 66	1214 00	975 48	2189 48
2012-13	0 00	91 98	91 98			
ಒಟ್ಟು	**11184.68**	**4994.90**	**16179.58**	**9547.00**	**4546.05**	**14093.05**

ಬೆ.ಮ.ಸಾ. ಸಂಸ್ಥೆಯು ಮೇಲ್ಕಂಡ ಅನುದಾನವನ್ನು ಬಳಕೆ ಮಾಡಿಕೊಂಡು ನಗರದ ವಿವಿಧ ಭಾಗಗಳಲ್ಲಿ ವಿವಿದೋದ್ದೇಶ 10 ಸಂಚಾರ ಮತ್ತು ಸಾಗಣೆ ಕೇಂದ್ರಗಳನ್ನು (ಟಿ.ಟಿ.ಎಂ.ಸಿ.) ನಿರ್ಮಿಸಿದೆ. ಹಾಗೂ 1000 ಪ್ರಯಾಣಿಕ ಬಸ್ಸುಗಳನ್ನು ಖರೀದಿಸಿ ಸಾರ್ವಜನಿಕ ಸೇವೆಗೆ ಸಮರ್ಪಿಸಿದೆ.

ಆರೋಗ್ಯ ಕಾರ್ಯಕ್ರಮಗಳು

505(971); ಶ್ರೀ ಹ್ಯಾರಿಸ್ ಎನ್ ಎ. (ಶಾಂತಿ ನಗರ)

ಅ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ಆರೋಗ್ಯ ಕಾರ್ಯಕ್ರಮಗಳ ವಿವರಗಳೇನು;

ಆ) ಆರೋಗ್ಯ ಕೇಂದ್ರಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳು ಎಷ್ಟು; (ವಿವರ ಒದಗಿಸುವುದು)

ಇ) ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರು ಅವಲಂಬಿತರಾಗಿರುವ ಆರೋಗ್ಯ ಸೇವೆಗೆ ವೈದ್ಯರುಗಳ ಕೊರತೆಯನ್ನು ಪರಿಹರಿಸಿಕೊಳ್ಳುವಲ್ಲಿ ಸರ್ಕಾರದ ಕ್ರಮಗಳೇನು;

ಈ) ಮಹಿಳೆಯರು ಮತ್ತು ಮಕ್ಕಳು ಆರೋಗ್ಯ ಸೇವೆಯ ಕುರಿತಾಗಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರೋಗ ನಿರೋಧಕ ಚಿಕಿತ್ಸಾತ್ಮಕ, ಉತ್ತೇಜಕ ಹಾಗೂ ಪುನರ್ವಸತಿ ಸೇವೆಗಳನ್ನು ಒಳಗೊಂಡಂತೆ ಎಲ್ಲಾ ರಾಜ್ಯ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ವಿವಿಧ ಪ್ರಮುಖ ಆರೋಗ್ಯ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಆ) ಆರೋಗ್ಯ ಕೇಂದ್ರಗಳಲ್ಲಿ ಮಂಜೂರಾದ ಹುದ್ದೆಗಳಲಿ 245 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

(ಖಾಲಿ ಇರುವ ಹುದ್ದೆಗಳ ವಿವರ ಅನುಭಂಧ–1ರಲ್ಲಿ ನೀಡಲಾಗಿದೆ.)

ಇ) ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿರವರಿಗೆ ಅನುಮತಿ ನೀಡಲಾಗಿದೆ.

ಈ) ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುವುದು.

- **ಪ್ರಸೂತಿ ಆರೈಕೆ:** ಮಹಿಳೆಯು ಗರ್ಭಾವಸ್ಥೆಯ ಎರಡನೇ ತ್ರೈಮಾಸಿಕದಲ್ಲಿ ಪೌಷ್ಟಿಕ ಆಹಾರದ ಸೇವನೆಗಾಗಿ ₹ 1000/– ಆರ್ಥಿಕ ಸಹಾಯವನ್ನು ಹಾಗೂ ಹೆರಿಗೆಯಾದ ನಂತರ ಶಿಶುವಿನ

ಅರೈಕೆಗಾಗಿ ₹ 1000/ ಗಳನ್ನು (ಜೆ.ಎಸ್.ವೈ. ಆರ್ಥಿಕ ಸಹಾಯದೊಂದಿಗೆ) ನೀಡಲಾಗುತ್ತಿದೆ.

- **ಮಡಿಲು:** ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡ ಬಿ.ಪಿ.ಎಲ್./ ಎಸ್.ಸಿ./ಎಸ್.ಟಿ. ಮಹಿಳೆಯರಿಗೆ ಮೊದಲ ಎರಡು ಜೀವಂತ ಜನನಗಳಿಗೆ ಬಾಣಂತಿ ಹಾಗೂ ನವಜಾತ ಶಿಶುವಿನ ಆರೈಕೆಗಾಗಿ 19 ಸಾಮಗ್ರಿಗಳುಳ್ಳ ಒಂದು ಕಿಟ್‌ನ್ನು ವಿತರಿಸಲಾಗುತ್ತಿದೆ.
- **ತಾಯಿ ಭಾಗ್ಯ:** ರಾಜ್ಯದ 7 ಹಿಂದುಳಿದ ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಉಚಿತ ಹೆರಿಗೆ ಸೇವೆಯನ್ನು ನೀಡಲಾಗುತ್ತಿದೆ.
- **ತಾಯಿ ಭಾಗ್ಯ ಪ್ಲಸ್:** ಮಹಿಳೆಯು ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡಲ್ಲಿ ಅಂತಹ ಮಹಿಳೆಗೆ ₹ 1000/–ಗಳ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.

ಮೇಲಿನ ಎಲ್ಲಾ ಯೋಜನೆಗಳು ಬಿ.ಪಿ.ಎಲ್./ಎಸ್.ಸಿ./ಎಸ್.ಟಿ ಕಟುಂಬದವರು ಫಲಾನುಭವಿಗಳಾಗಿರುತ್ತಾರೆ. ಹಾಗೂ ಎರಡು ಜೀವಂತ ಜನನಗಳಿಗೆ ಸೀಮಿತವಾಗಿರುತ್ತದೆ.

- **ಜನನಿ ಸುರಕ್ಷಾ ಯೋಜನೆ:** ಇದು ಭಾರತ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯಡಿಯಲ್ಲಿಯೂ ಸಹ ಫಲಾನುಭವಿಗೆ ಈ ಕೆಳಕಂಡಂತೆ ಆರ್ಥಿಕ ಸಹಾಯವನ್ನು ನೀಡಲಾಗುತ್ತದೆ.
  - ಮನೆಯಲ್ಲಿ ಹೆರಿಗೆಯಾದರೆ: ₹ 500/-
  - ಆಸ್ಪತ್ರೆಯಲ್ಲಿ ಹೆರಿಗೆಯಾದರೆ:
    - ಗ್ರಾಮೀಣ ಪ್ರದೇಶದಲ್ಲಿ: ₹ 700/-
    - ನಗರ ಪ್ರದೇಶದಲ್ಲಿ ₹ 600/-

- ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಲ್ಲಿ ₹ 1500/–
- **ಜನನಿ ಶಿಶು ಸುರಕ್ಷಾ ಯೋಜನೆ:** ಈ ಯೋಜನೆಯು ಭಾರತ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯಡಿಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬರುವ ಎಲ್ಲಾ ವರ್ಗದ ಗರ್ಭಿಣಿ ಮಹಿಳೆಯರಿಗೆ ಉಚಿತವಾಗಿ ಈ ಕೆಳಕಂಡ ಸೌಲಭ್ಯವನ್ನು ನೀಡಲಾಗುತ್ತಿದೆ.
    - ವೈದ್ಯಕೀಯ ತಪಾಸಣೆ ಮತ್ತು ಔಷಧಗಳು
    - ಆಸ್ಪತ್ರೆಯಲ್ಲಿ 48 ಘಂಟೆಗಳ ಕಾಲ ಉಳಿದುಕೊಳ್ಳುವ ಸಲುವಾಗಿ ಉಚಿತ ಊಟದ ವ್ಯವಸ್ಥೆ.
    - ಗರ್ಭಾವಸ್ಥೆಯಲ್ಲಿರುವ ಸಂದರ್ಭದಲ್ಲಿ ಅಗತ್ಯ ಪ್ರಯೋಗ ಶಾಲಾ ಸೇವೆಗಳನ್ನು ಉಚಿತವಾಗಿ ಮಾಡಲಾಗುತ್ತದೆ.
    - ರಕ್ತದ ಅವಶ್ಯಕತೆಯಿದ್ದಲ್ಲಿ ಉಚಿತವಾಗಿ ರಕ್ತವನ್ನು ನೀಡಲಾಗುತ್ತದೆ
    - ಗರ್ಭಿಣಿ ಸ್ತ್ರೀಯನ್ನು ಮನೆಯಿಂದ ಆಸ್ಪತ್ರೆಗೆ ರವಾನಿಸಲು ಮತ್ತು ಆಸ್ಪತ್ರೆಯಿಂದ ಮೇಲ್ದರ್ಜೆ ಆಸ್ಪತ್ರೆಗೆ ರವಾನಿಸಲು 108 ಉಚಿತ ವಾಹನದ ವ್ಯವಸ್ಥೆಯಿದೆ.

ಪ್ರಶ್ನೆ ಸಂಖೆಯ: 971ಕ್ಕೆ

ಅನುಬಂಧ–2

❖ **ತಾಯಿ ಭಾಗ್ಯ ಯೋಜನೆ:** ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ತಜ್ಞ ವೈದ್ಯರುಗಳ ಕೊರತೆಯಿಂದಾಗಿ ತಾಯಿ ಮತ್ತು ಮಕ್ಕಳ ಸೇವೆಯನ್ನು ಸಮರ್ಪಕವಾಗಿ ನೀಡಲು ಪಟ್ಟಣ/ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿನ ವೈದ್ಯರ ಸೇವೆಯನ್ನು ಪಡೆದು, ಸಾರ್ವಜನಿಕರಿಗೆ ತಜ್ಞ ಪ್ರಸೂತಿ ಸೇವೆಯ ಸೌಲಭ್ಯಗಳನ್ನು ಒದಗಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು ಹಿಂದುಳಿದ 7 ಜಿಲ್ಲೆಗಳಾದ ಗುಲ್ಬರ್ಗಾ, ಯಾದಗಿರಿ, ಕೊಪ್ಪಳ, ಬಿಜಾಪುರ, ರಾಯಚೂರು, ಬೀದರ್, ಬಾಗಲಕೋಟೆ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ತಜ್ಞ ವೈದ್ಯರ ಸೇವೆಯು ಲಭ್ಯವಿರುವ ಖಾಸಗಿ ಆಸ್ಪತ್ರೆಗಳನ್ನು ಸಾರ್ವಜನಿಕ–ಖಾಸಗಿ ಸಹಯೋಗದಲ್ಲಿ ತಾಯಿ ಭಾಗ್ಯ ಯೋಜನೆಯಲ್ಲಿ ತೊಡಗಿಸಿಕೊಂಡು, ಈ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಮಹಿಳೆಯರಿಗೆ ಸಂಪೂರ್ಣ ನಗದು ರಹಿತ (Totally Cashless treatment) ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ದೊರಕಿಸುವಂತೆ ರೂಪಿಸಲಾಗಿದೆ.

ಮುಂದುವರೆದು, ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭಾಗದ ಎಲ್ಲಾ ತಾಯಂದಿರು (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸೇರಿದಂತೆ) ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಂಡಲ್ಲಿ ₹ 1000/-- ನಗದು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಈ ಯೋಜನೆಯು 2011–11ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ.

- **ಪ್ರಸೂತಿ ಆರೈಕೆ:** ಈ ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ ಅಗತ್ಯ ಪೌಷ್ಟಿಕಾಂಶಗಳ ನೆರವನ್ನು

ಪಡೆಯಲು ₹ 2000/– (ಜನನಿ ಸುರಕ್ಷಾ ಯೋಜನೆಯ ಅನುದಾನವು ಸೇರಿ) ಉತ್ತೇಜನ ಹಣವನ್ನು ನೀಡಲಾಗುತ್ತಿದೆ.

- **ಮಡಿಲು:** ಸಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಬಡತನ ರೇಖೆಗಿಂತ ಕೆಳಗಿರುವ ಪ್ರತಿಯೊಬ್ಬ ತಾಯಿಗೆ 19 ಸಾಮಗ್ರಿಗಳ ಒಂದು ಆರೋಗ್ಯ ಕಿಟ್‌ನ್ನು ನೀಡಲಾಗುತ್ತಿದೆ.

❖ **ಆರೋಗ್ಯ ಕವಚ:** ಈ ಯೋಜನೆಯಡಿ ವೈದ್ಯಕೀಯ, ಪೋಲಿಸ್ ಮತ್ತು ಅಗ್ನಿಶಾಮಕ ಘಟಕಗಳಿಗೆ ಸಂಬಂಧಿಸಿದಂತೆ ಯಾವುದೇ ತುರ್ತು ಸ್ಥಿತಿಯಲ್ಲಿ ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ 108ಕ್ಕೆ ಕರೆ ಮಾಡಿದ್ದಲ್ಲಿ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಆಧುನಿಕ ಉಪಕರಣಗಳನ್ನು ಒಳಗೊಂಡ ಆಂಬ್ಯುಲೆನ್ಸ್ ಘಟನೆಯ ಸ್ಥಳಕ್ಕೆ ತೆರಳಿ, ತುರ್ತು ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ ತದನಂತರ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

❖ **ವಾಜಪೇಯಿ ಆರೋಗ್ಯ ಶ್ರೀ:** ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರು ಒಮ್ಮೆಲೆ ದುರಂತ ಮಾಡುವ ಆರೋಗ್ಯ ಅಘಾತಗಳಿಗೆ ಒಳಗಾದಾಗ ಉಂಟಾಗುವ ತೊಂದರೆಯನ್ನು ನಿವಾರಿಸಲು "ವಾಜಿಪೇಯಿ ಆರೋಗ್ಯ ಶ್ರೀ" ಎಂಬ ಆರೋಗ್ಯ ಚಿಕಿತ್ಸಾ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಪಲ್ಯ, ಸುಟ್ಟಗಾಯಗಳು, ಪಾಲಿಟ್ರೋಮ ಹಾಗೂ ಗುರುತಿಸಲ್ಪಟ್ಟ 402 ಇತರ ಶಸ್ತ್ರ ಚಿಕಿತ್ಸೆಗಳಿಗೆ ₹ 2 00 ಲಕ್ಷದ ವರೆಗೆ ಫ್ಯಾಮಿಲಿ ಫ್ಲೋಟರ್ ಆಧಾರದ ಮೇಲೆ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

❖ **ಆರೋಗ್ಯ ಸಹಾಯ ವಾಣಿ (104):** ಆರೋಗ್ಯದ ಕ್ಷೇತ್ರದಲ್ಲಿ ಯಾವುದೇ ಸಂದೇಹಗಳ ಪರಿಹಾರಕ್ಕಾಗಿ, ಸಮಾಲೋಚನೆಗಾಗಿ ಹಾಗೂ ಯಾವುದಾದರೂ ದೂರುಗಳಿದ್ದಲ್ಲಿ ನಾಗರೀಕರು ದೂರವಾಣಿಯ ಮೂಲಕ 104ಗೆ ಕರೆ ಮಾಡಿ ಈ ಸಹಾಯವಾಣಿಯ ಉಪಯೋಗ

ಪಡೆದುಕೊಳ್ಳಬಹುದು. ಈ ಸೇವೆಯು 24 ಘಂಟೆಯು ಕಾರ್ಯನಿರ್ವಹಿಸುತ್ತಿದ್ದು, ಉಚಿತವಾಗಿರುತ್ತದೆ.

- **ಸಂತಾನಹರಣ ಶಸ್ತ್ರ ಚಿಕಿತ್ಸೆ ಪ್ರಮಾಣ ಪತ್ರ ಜೊತೆಗೆ ಬಿಡುಗಡೆ ಪತ್ರ:** ಸಿಬ್ಬಂದಿಗೆ ತರಬೇತಿ ನೀಡಿ, ಈ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕ್ರಮಕೈಗೊಂಡು, ಪ್ರತಿ ಆಸ್ಪತ್ರೆಯಲ್ಲಿ ದೊರಕುವ ಸೇವೆಗಳ ಬೋರ್ಡ್ ಬರೆಯುವುದು, ಜವಾಬ್ದಾರಿಯುತ ಅಧಿಕಾರಿಯನ್ನು ಹೆಸರಿಸುವುದು.
- **ಪಲ್ಸ್ ಪೋಲಿಯೋ ಕಾರ್ಯಕ್ರಮ:** ಪೋಲಿಯೋ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸದುದ್ದೇಶದಿಂದ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು 1995-96 ರಿಂದ ಸತತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ವರ್ಷವು ಎರಡು ಸುತ್ತುಗಳಲ್ಲಿ ಪಲ್ಸ್ ಪೋಲಿಯೋ ಹನಿಗಳನ್ನು ಎಲ್ಲಾ 5ವರ್ಷದೊಳಗಿನ ಮಕ್ಕಳಿಗೆ ಹಾಕಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.
- **ನಾಗರಿಕ ಸಹಾಯವಾಣಿ:** ಈ ಯೋಜನೆಯನ್ನು ಜಿಲ್ಲಾ ಆಸ್ಪತ್ರೆ ಹಾಗೂ ಮುಖ್ಯ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಉದ್ದೇಶ ರೋಗಿಗಳಿಗೆ ತಿಳುವಳಿಕೆ ಹಾಗೂ ಸಹಾಯವನ್ನು ಸೂಕ್ತ ಸಮಯದಲ್ಲಿ ವೈದ್ಯಕೀಯ ಸೌಲಭ್ಯವನ್ನು ಪಡೆಯುವಂತೆ ಮಾರ್ಗದರ್ಶನ ನೀಡುವುದು. ಈ ನಾಗರೀಕ ಸೇವಾ ಕೇಂದ್ರಗಳು ದಿನದ 24 ಘಂಟೆಯು ಸೇವೆಯನ್ನು ಒದಗಿಸುತ್ತಿದೆ.
- **ತಾಯಿ ಮತ್ತು ಮಕ್ಕಳ ಅನುಸರಣಾ ಮಾರ್ಗ ಯೋಜನೆ:** (Mother and Child Tracking System) ಈ ಕಾರ್ಯಕ್ರಮವು ಅಂತರ್‌ಜಾಲ ಆಧಾರಿತ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಪ್ರದೇಶದ ಬಡ ಗರ್ಭಿಣಿ ಸ್ತ್ರೀಯರು ಮತ್ತು ಬಾಣಂತಿಯರ ಮನೆ ಬಾಗಿಲಿಗೆ ಸೌಲಭ್ಯವನ್ನು ಒದಗಿಸುವುದಾಗಿರುತ್ತದೆ. ಈ ಕಾರ್ಯಕ್ರಮವನ್ನು ಭಾರತ ಸರ್ಕಾರವು ಮಹತ್ವದ ಕಾರ್ಯಕ್ರಮವೆಂದು ಒಪ್ಪಿಕೊಂಡಿರುತ್ತದೆ. ಈ ಕಾರ್ಯಕ್ರಮವನ್ನು ಬೇರೆ ರಾಜ್ಯಗಳಿಗೂ ವಿಸ್ತರಿಸಲು ಕ್ರಮ ವಹಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಅಮೆರಿಕದ ರಾಕ್ ಫಿಲ್ಲರ್

ಸಂಸ್ಥೆಯು "ಟಾಪ್ ಇನೋವೇಟರ್ ಚಾಲೆಂಜ್ ಅವಾರ್ಡ್‌ನ್ನು" ಡಿಸೆಂಬರ್ 2011ರಲ್ಲಿ ನೀಡಿರುತ್ತದೆ.

ಇದಲ್ಲದೇ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಹೊಸ ಯೋಜನೆಗಳನ್ನು ಸಹ ಸಾರ್ವಜನಿಕರಿಗೆ ಒದಗಿಸಲು ಸರ್ಕಾರ ತೀರ್ಮಾನಿಸಿದೆ.

1. **ರಾಜ್ಯದ ಪ್ರತಿ ಜಿಲ್ಲೆಯ ಒಂದು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಯುಷ್ ಘಟಕವನ್ನು ಸ್ಥಾಪಿಸುವ ಯೋಜನೆ:** ಪ್ರಸ್ತುತ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಆಯುಷ್ ಆರೋಗ್ಯ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಜೊತೆಗೆ ಹೆಚ್ಚುವರಿಯಾಗಿ ಪ್ರತಿ ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ 10 ಹಾಸಿಗೆಗಳ ಆಯುಷ್ ಘಟಕವನ್ನು ಸ್ಥಾಪಿಸಲು ಆದೇಶಿಸಲಾಗಿದೆ. 2013–14ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2210–02–101–1–07 (ಯೋಜನೆ) ಅಡಿಯಲ್ಲಿ ₹ 450 00 ಲಕ್ಷ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಈ ಕುರಿತು ಸರ್ಕಾರದ ಆದೇಶ ಸಂಖ್ಯೆ:ಆಕುಕ/322(1)/ಸಿಐಎಂ,/2013 ದಿನಾಂಕ:31–08–2013 ರಂದು ಆದೇಶ ಹೊರಡಿಸಲಾಗಿದೆ.
2. **ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಒಂದೊಂದು ಸಂಚಾರಿ ಆಯುಷ್ ಘಟಕವನ್ನು ಸ್ಥಾಪಿಸುವ ಯೋಜನೆ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಕುಕ/322(2) ಪಿಐ.ಎಂ 2013, ಬೆಂಗಳೂರು ದಿ:31–08–2013ರಲ್ಲಿ ಆಯುಷ್ ಸಂಚಾರಿ ಘಟಕಗಳನ್ನು ತೆರೆಯಲು ಸರ್ಕಾರವು ತಾತ್ವಿಕ ಒಪ್ಪಿಗೆ ನೀಡಿದೆ ಈ ಘಟಕಗಳನ್ನು ಸಾರ್ವಜನಿಕ ಸಹಭಾಗಿತ್ವದಲ್ಲಿ ಪ್ರಾರಂಭಿಸಲು ಸಂಘಸಂಸ್ಥಗಳಿಂದ ಆಸಕ್ತಿ ವ್ಯಕ್ತಪಡಿಸಲು ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಅರ್ಜಿಗಳು ಸ್ವೀಕೃತವಾದ ನಂತರ ಆಯುಷ್ ಸಂಚಾರಿ ಘಟಕಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

3 **ರಾಜ್ಯದ 35000 ಆಶಾ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವ ಪ್ರೋತ್ಸಾಹ ಧನದ ಜೊತೆಗೆ ರಾಜ್ಯ ಸರ್ಕಾರವೂ ಸಹ**

ಪ್ರೋತ್ಸಾಹ ಧನ ನೀಡುವ ಯೋಜನೆ: ಸರ್ಕಾರದ ಆದೇಶ ಸಂಖ್ಯೆ:ಆಕುಕ/109/ಎಫ್‌ಪಿಆರ್/2013, ದಿನಾಂಕ:28–10–2013ರ ಆದೇಶದಲ್ಲಿ 2013–14ನೇ ಸಾಲಿನಿಂದ ರಾಜ್ಯದ **ಆಶಾ** ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವ ಪ್ರೋತ್ಸಾಹ ಧನದ ಜೊತೆಗೆ ರಾಜ್ಯ ಸರ್ಕಾರವೂ ಸಹ ಮ್ಯಾಚಿಂಗ್ ಇನ್ಸೆಂಟಿವ್ ನೀಡುವ ಯೋಜನೆಗೆ ₹ 25,61,73,000/– (ಇಪ್ಪತ್ತೈದು ಕೋಟಿ ಅರವತ್ತೊಂದು ಲಕ್ಷದ ಎಪ್ಪತ್ತಮೂರು ಸಾವಿರಗಳು ಮಾತ್ರ) ಗಳನ್ನು ಮಂಜೂರು ಮಾಡಲು ಸರ್ಕಾರ ಅನುಮೋದನೆ ನೀಡಿದೆ.

4. **ಪ್ರತಿ ಜಿಲ್ಲೆಯ ಒಂದು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕವನ್ನು ಸ್ಥಾಪಿಸುವ ಯೋಜನೆ:** ಸರ್ಕಾರದ ಆದೇಶ ಸಂಖ್ಯೆ:ಆಕುಕ/336/ಸಿಜಿಎಂ/2013, ದಿನಾಂಕ:31–08–2013 ರಂತೆ ಪ್ರತಿ ಜಿಲ್ಲೆಯ ಒಂದು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಿದೆ. ಇದಕ್ಕಾಗಿ ₹ 1080 38 ಲಕ್ಷಗಳಷ್ಟು ಅನುದಾನದ ಅಗತ್ಯವಿರುತ್ತದೆ.

5. **ಬೆಂಗಳೂರಿನಲ್ಲಿ ಭಾರತೀಯ ಸಾರ್ವಜನಿಕ ಆರೋಗ್ಯ ಸಂಸ್ಥೆ (ಪಿ.ಹೆಚ್.ಎಫ್.ಐ.) ಸ್ಥಾಪಿಸುವ ಬಗ್ಗೆ:** ಆರೋಗ್ಯ ಸೇವೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಆಕುಕ/ 337/ಸಿಜಿಎಂ/2013, ದಿನಾಂಕ:31–08–2013ರಂತೆ ಬೆಂಗಳೂರಿನಲ್ಲಿ ಭಾರತೀಯ ಸಾರ್ವಜನಿಕ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರವು ತಾತ್ವಿಕವಾಗಿ ಅನುಮೋದನೆ ನೀಡಿದೆ. ಇದಕ್ಕಾಗಿ ಲೆಕ್ಕ ಶೀರ್ಷಿಕೆ: 4210–04–200–1–03 (ಯೋಜನೆಯಡಿ) ₹ 10.00 ಕೋಟಿ ಮಂಜೂರು ಮಾಡಲಾಗಿದೆ.

6. **ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಒಂದು ಜೆನರಿಕ್ ಔಷಧಿ ಮಳಿಗೆ ಸ್ಥಾಪಿಸುವ ಬಗ್ಗೆ:** ಜೆನರಿಕ್ ಔಷಧಗಳು ಬ್ರಾಂಡೆಡ್ ಔಷಧಿಗಳಿಗಿಂತ ಶೇ.40ರಿಂದ ಶೇ.50 ರಷ್ಟು ಅಗ್ಗವಾಗಿವೆ. ಆದುದರಿಂದ ನಮ್ಮ

ಸರ್ಕಾರವು ಪ್ರತಿ ತಾಲ್ಲೂಕಿಗೆ ಒಂದರಂತೆ ಜೆನರಿಕ್ ಔಷಧಿಗಳ ಮಳಿಗೆಗಳನ್ನು ಕೇಂದ್ರ/ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಾರ್ವಜನಿಕ ಉದ್ದಿಮೆಗಳ ಮೂಲಕ ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/68/ಹೆಚ್‌ಪಿಸಿ/2013, ದಿನಾಂಕ:31–08–2013ರಂತೆ ಆದೇಶ ಹೊರಡಿಸಿದೆ.

7. **ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ, ಮತ್ತು ಸಂಜಯಗಾಂಧಿ ಟ್ರಾಮಾ ಮತ್ತು ಆರ್ಥೋಪೆಡಿಕ್ ಆಸ್ಪತ್ರೆಗಳಲ್ಲಿ ಇ–ಹಾಸ್ಪಿಟಲ್ ಸ್ಥಾಪಿಸುವ ಬಗ್ಗೆ:** ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ, ಮತ್ತು ಸಂಜಯಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಗಳಲ್ಲಿ ಇ–ಆಸ್ಪತ್ರೆ ತಂತ್ರಾಂಶವನ್ನು ಅಳವಡಿಸಲು Department of Electronics and Information Technology (Deity), Government of India ಮುಖಾಂತರ ನಿರ್ವಹಿಸಲು ಸರ್ಕಾರದ ಆದೇಶ ಸಂಖ್ಯೆ: ಆಕುಕ/564/ಸಿಜಿಎಂ/2012, ದಿನಾಂಕ:31–08–2013 ರಂತೆ ಆದೇಶ ಹೊರಡಿಸಿದೆ. ಇದಕ್ಕಾಗಿ ರಾಜ್ಯ ಸರ್ಕಾರದ ಪಾಲಿನ ವಂತಿಗೆ ₹ 4,09,24,582/– (ನಾಲ್ಕು ಕೋಟಿ ಒಂಭತ್ತು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಐದುನೂರಾ ಎಂಭತ್ತೆರಡು ರೂಪಾಯಿಗಳು) ಗಳನ್ನು ಮಂಜೂರು ಮಾಡಿದೆ.

8. **ಗದಗದಲ್ಲಿರುವ ಸರ್ಕಾರಿ ಹೆರಿಗೆ ಆಸ್ಪತ್ರೆಯ ಆಧುನೀಕರಣ ಮತ್ತು ವಿಸ್ತರಣೆ:** ಸರ್ಕಾರದ ಆದೇಶ ಸಂಖ್ಯೆ:ಆಕುಕ/353/ಸಿಜಿಎಂ/2013, ದಿನಾಂಕ.31–08–2013ರಂತೆ ಗದಗದಲ್ಲಿರುವ ಸರ್ಕಾರಿ ಹೆರಿಗೆ ಆಸ್ಪತ್ರೆಯ ಆಧುನೀಕರಣ ಮತ್ತು ವಿಸ್ತರಣೆಗಾಗಿ, ₹ 14,00 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿದೆ.

9. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಲ್ಲಿ ಇ–ಆಡಳಿತ ತಂತ್ರಾಂಶವನ್ನು ಅಳವಡಿಸುವ ಬಗ್ಗೆ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಲ್ಲಿ ಪತ್ರ

ನಿರ್ವಹಣಾ ವ್ಯವಸ್ಥೆ ಮತ್ತು ಕಡತ ನಿರ್ವಹಣಾ ವ್ಯವಸ್ಥೆಯುಳ್ಳ ಇ-ಆಡಳಿತ ತಂತ್ರಾಂಶವನ್ನು ಅಳವಡಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/360/ಸಿಜಿಎಂ/ 2013, ದಿನಾಂಕ:31-08-2013ರಂತೆ ತಾತ್ವಿಕ ಅನುಮೋದನೆ ನೀಡಿದೆ.

10. **ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಸಮೂದಾಯ ಮಾನಸಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ:** ರಾಜ್ಯದಲ್ಲಿ ತೀವ್ರವಾದ ಮಾನಸಿಕ ಖಾಯಿಲೆಯುಳ್ಳ ರೋಗಿಗಳ ಆರೈಕೆಗೆ ಲಭ್ಯವಿರುವ ಹಾಸಿಗೆಗಳ ಸಂಖ್ಯೆ ಕಡಿಮೆಯಿದೆ. ಆದ್ದರಿಂದ ರಾಜ್ಯ ಪ್ರತಿ ಜಿಲ್ಲೆಯಲ್ಲಿ ಒಂದರಂತೆ ಮಾನಸಿಕ ರೋಗಿಗಳಿಗೆ ವಸತಿ ಸೌಲಭ್ಯವುಳ್ಳ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/312/ಸಿಜಿಇ/2013, ದಿನಾಂಕ:31-08-2013ರಂತೆ ತಾತ್ವಿಕವಾಗಿ ಮಂಜೂರಾತಿ ನೀಡಿದೆ ಇದಕ್ಕಾಗಿ ₹ 337.50 ಲಕ್ಷಗಳ ಅನುದಾನವನ್ನು ಒದಗಿಸಿದೆ.

11. **ರಾಜ್ಯದ 32.50 ಲಕ್ಷ ಯುವತಿಯರಿಗೆ ಋತುಚಕ್ರ ಸಂದರ್ಭದಲ್ಲಿ ಶುಚಿತ್ವ ಕಾಪಾಡಲು ಸ್ಯಾನಿಟರಿ ಪ್ಯಾಡುಗಳನ್ನು ಉಚಿತವಾಗಿ ನೀಡುವ ಬಗ್ಗೆ:** 32.50 ಲಕ್ಷ ಯುವತಿಯರಿಗೆ ಋತುಚಕ್ರ ಸಂದರ್ಭದಲ್ಲಿ ಶುಚಿತ್ವ ಕಾಪಾಡಲು ಒಂದು ವರ್ಷಕ್ಕೆ 10 ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳ 13 ಪ್ಯಾಕ್‌ಗಳನ್ನು ಉಚಿತವಾಗಿ ಸರಬರಾಜು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಆಕುಕ/ 107/ ಎಫ್.ಪಿ.ಆರ್/ 2013, ದಿನಾಂಕ:31-08-2013 ರಂತೆ ಮಂಜೂರಾತಿ ನೀಡಿದೆ. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ₹ 3617.98 ಲಕ್ಷಗಳ ಅನುದಾನ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

12. **ಗುಲ್ಬರ್ಗಾದಲ್ಲಿ ಹೊಸ ಸರ್ಕಾರಿ ಔಷಧ ಮಹಾವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ:** ಗುಲ್ಬರ್ಗಾದಲ್ಲಿ ಹೊಸ ಸರ್ಕಾರಿ ಔಷಧ ಮಹಾವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ: ಆಕುಕ/ 383/ ಪಿಟಿಡಿ/ 2012, ದಿನಾಂಕ:31-08-2013ರಂತೆ

ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ಪ್ರಾರಂಭಿಸುವ ಪ್ರಸ್ತಾವನೆಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ತಾತ್ವಿಕ ಮಂಜೂರಾತಿ ನೀಡಿದೆ.

13. **ಎ ಆರ್.ಟಿ. ಚಿಕಿತ್ಸೆಯನ್ನು ಪಡಿಯುತ್ತಿರುವ ಹೆಚ್.ಐ.ವಿ. ಸೋಂಕಿತರಿಗೆ ಹಾಗೂ ಕ್ಷಯ ರೋಗಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವ ಬಗ್ಗೆ:** ಕ್ಷಯ ರೋಗಿಗಳಿಗೆ ಮತ್ತು ಹೆಚ್.ಐ.ವಿ. ಪೀಡಿತರಿಗೆ ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಪೌಷ್ಠಿಕ ಆಹಾರದ ಬೆಂಬಲವನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/309/ಸಿ.ಜಿ.ಇ/2013, ದಿನಾಂಕ:31–08–2013ರಂತೆ ಆದೇಶ ನೀಡಿದೆ. ಈ ಯೋಜನೆಯಿಂದ ಸುಮಾರು 70.000 ಕ್ಷಯ ರೋಗಿಗಳು ಮತ್ತು 93.000 ಹೆಚ್.ಐ.ವಿ. ಪೀಡಿತರಿಗೆ ಪ್ರಯೋಜನವಾಗಲಿದೆ.

14. **ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಎಂಡೋಸಲ್ಫಾನ್ ಪೀಡಿತರ ಆರೋಗ್ಯ ಸುಧಾರಣೆಗಾಗಿ ಪುನರ್‌ವಸತಿ ಯೋಜನೆ:** ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಎಂಡೋಸಲ್ಫಾನ್‌ನಿಂದ ಬಾಧಿತರಾದ ಜನರ ಸಮೀಕ್ಷೆ ನಡಿಸಿ ಅವರಿಗೆ ಪುನರ್‌ವಸತಿ ಯೋಜನೆಯ ಮೂಲಕ ಶಾಶ್ವತ ಪರಿಹಾರ ಕಲ್ಪಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/348/ಸಿ.ಜಿ.ಎಂ/2013, ದಿನಾಂಕ·31–08–2013ರಂತೆ ಕ್ರಿಯಾ ಯೋಜನೆಗೆ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿರುತ್ತದೆ. ಇದಕ್ಕಾಗಿ ₹ 515.00 ಲಕ್ಷ ಆವರ್ತಕ ವೆಚ್ಚ ಹಾಗೂ ₹ 4485 00 ಲಕ್ಷ ಅನಾವರ್ತಕ ವೆಚ್ಚ ತಗಲಬಹುದೆಂದು ಅಂದಾಜಿಸಲಾಗಿದೆ.

15. **ಕರ್ನಾಟಕ ರಾಜ್ಯದಲ್ಲಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಮತ್ತು ಅವಲಂಬಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಆರೋಗ್ಯ ಸೇವೆ ಮತ್ತು ವೈದ್ಯಕೀಯ ಚಿಕಿತ್ಸೆ ಒದಗಿಸುವ ಬಗ್ಗೆ:** ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಅವರ ಪತ್ನಿ/ಪತಿ ಮತ್ತು

ಅವರನ್ನು ಅವಲಂಬಿಸಿರುವ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಕರ್ನಾಟಕ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವಿಶೇಷ ಆದ್ಯತೆ ನೀಡಿ ಉಚಿತವಾಗಿ ಆರೋಗ್ಯ ಸೇವೆ ಮತ್ತು ಚಿಕಿತ್ಸೆ ಒದಗಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/111/ಎಫ್.ಪಿಆರ್/2013, ದಿನಾಂಕ:31-10-2013ರಂತೆ ಮಂಜೂರಾತಿ ನೀಡಿದೆ.

16. **ಬೆಳಗಾವಿ ಮತ್ತು ಮೈಸೂರಿನ ಪ್ರಾದೇಶಿಕ ಆಹಾರ ಪ್ರಯೋಗಾಲಯಗಳನ್ನು ಉನ್ನತೀಕರಿಸುವ ಬಗ್ಗೆ:** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ನವದೆಹಲಿ ಇವರ ಸಹಯೋಗದೊಂದಿಗೆ ಬೆಳಗಾವಿ ಮತ್ತು ಮೈಸೂರಿನ ಪ್ರಾದೇಶಿಕ ಆಹಾರ ಪ್ರಯೋಗಾಲಯಗಳನ್ನು ಉನ್ನತೀಕರಿಸಲು ಸರ್ಕಾರದ ಆದೇಶ ಸಂಖ್ಯೆ:314/ಸಿ.ಜಿಇ./2013, ದಿನಾಂಕ:31-08-2013ರಂತೆ National Accreditation Board of Laboratories (NABL) ಅರ್ಹತೆಗೆ ಮೇಲ್ದರ್ಜೆಗೇರಿಸಲು ಸರ್ಕಾರವು ತಾತ್ವಿಕ ಮಂಜೂರಾತಿ ನೀಡಿದೆ.

17. **ಕೇಂದ್ರ ಸರ್ಕಾರದ ನೆರವಿನೊಂದಿಗೆ 127 ಕೋಟಿ ರೂ.ಗಳ ವೆಚ್ಚದಲ್ಲಿ ನಗರ ಪ್ರದೇಶಗಳಲ್ಲಿ ಎನ್.ಯು.ಹೆಚ್.ಎಂ. ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ:** 1) ರಾಜ್ಯದ ಬೆಂಗಳೂರು ನಗರ, 2) ಮೈಸೂರು ನಗರ, 3) ಬಾಗಲಕೋಟೆ ನಗರ 4) ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಪಟ್ಟಣ ಈ ನಾಲ್ಕು ನಗರ/ಪಟ್ಟಣ ಪ್ರದೇಶಗಳಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ/108/ಎಫ್.ಪಿಆರ್/2013, ದಿನಾಂಕ:31-08-2013ರಂತೆ ಸರ್ಕಾರ ಮಂಜೂರಾತಿ ನೀಡಿದೆ.

18. **ಆರೋಗ್ಯ ಕವಚ 108 ಯೋಜನೆಯಡಿ 2011ರ ಜನಗಣತಿ ಆಧಾರದ ಮೇಲೆ 1 ಲಕ್ಷ ಜನರಿಗೆ ಒಂದು ವಾಹನದಂತೆ ಅಗತ್ಯವಿರುವ ಹೆಚ್ಚುವರಿ 94 ಆಂಬ್ಯುಲನ್ಸ್ ವಾಹನಗಳನ್ನು ಒದಗಿಸುವ ಬಗ್ಗೆ:** ಸರ್ಕಾರದ

ಆದೇಶ ಸಂಖ್ಯೆ:ಆಕುಕ/311/ಸಿ.ಜಿ.ಇ/2013, ದಿನಾಂಕ: 31–08–2013 ರಂತೆ 24 ಎ.ಎಲ್.ಎಸ್. ವಾಹನಗಳು ಹಾಗೂ 70 ಬಿ.ಎಲ್.ಎಸ್. ವಾಹನಗಳ ಖರೀದಿಗೆ ಸರ್ಕಾರವು ಅನುಮೋದನೆ ನೀಡಿದೆ.

19. **ಬೆಂಗಳೂರಿನ ಶಂಕರ ಕ್ಯಾನ್ಸರ್ ಆಸ್ಪತ್ರೆಗೆ 10 ಕೋಟಿ ರೂ. ಒದಗಿಸುವ ಬಗ್ಗೆ:**–ಕ್ಯಾನ್ಸರ್ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ಹಾಗೂ ಬಡರೋಗಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ಮಟ್ಟದ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಬೆಂಗಳೂರಿನ ಶಂಕರ ಕ್ಯಾನ್ಸರ್ ಆಸ್ಪತ್ರೆಗೆ 10 ಕೋಟಿ ರೂ. ಒದಗಿಸಲು ಸರ್ಕಾರದ ಅದೇಶ ಸಂಖ್ಯೆ:ಆಕುಕ/307/ಸಿ.ಜಿ.ಇ/2013, ದಿನಾಂಕ:31–08–2013ರಂತೆ ತಾತ್ವಿಕವಾಗಿ ಮಂಜೂರಾತಿ ನೀಡಿದೆ.

20. **ರಾಜೀವ್ ಆರೋಗ್ಯ ಶ್ರೀ ಯೋಜನೆ:** ಕರ್ನಾಟಕ ರಾಜ್ಯದ ಜನಸಂಖ್ಯೆ 6.11 ಕೋಟಿ ಇದ್ದು ಈ ಪೈಕಿ ಬಿ.ಪಿಎಲ್. ಪಡಿತರ ಚೀಟಿ ಹೊಂದಿರುವ 4 ಕೋಟಿ ಜನರಿಗೆ ಕರ್ನಾಟಕ ಸರ್ಕಾರವು 2010ನೇ ಸಾಲಿನಿಂದ ಆರೋಗ್ಯ ಶ್ರೀ ಯೋಜನೆಯಡಿ ಗಂಭೀರ ಸ್ವರೂಪದ ಖಾಯಿಲೆಗಳಾದ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಖಾಯಿಲೆ, ಸುಟ್ಟಗಾಯ ಗಂಭೀರ ಸ್ವರೂಪದ ಅಪಘಾತ ಹಾಗೂ ನವಜಾತ ಶಿಶುಗಳಿಗೆ ಸಂಬಂಧಿಸಿದ ಖಾಯಿಲೆಗಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಸುಮಾರು 1 ಕೋಟಿ ಜನರು ಸ್ವಂತ ವಿಮೆ ಸಿ.ಜಿ. ಹೆಚ್.ಎಸ್., ಇ ಎಸ್.ಐ ಆರ್.ಎಸ್.ಬಿ.ವೈ ಯಶಸ್ವಿನಿ ಹಾಗೂ ಇನ್ನಿತರ ಯೋಜನೆಗಳ ಸೌಲಭ್ಯಗಳನ್ನು ಪಡೆಯುತ್ತಿದ್ದು ಸುಮಾರು 1.1 ಕೋಟಿ ಜನರಿಗೆ ರಾಜೀವ್ ಆರೋಗ್ಯ ಶ್ರೀ ಯೋಜನೆಯನ್ನು ಜಾರಿಗೊಳಿಸಲು ಕರ್ನಾಟಕ ಸರ್ಕಾರದ ಸಚಿವ ಸಂಪುಟವು ತೀರ್ಮಾನಿಸಿರುತ್ತದೆ. ಹಾಗೂ ಈ ಯೋಜನೆಗೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಲು ತೀರ್ಮಾನಿಸಿರುತ್ತದೆ. ಈ ಮಹತ್ವದ ತೀರ್ಮಾನದಿಂದಾಗಿ ಕರ್ನಾಟಕ ರಾಜ್ಯದ ಎಲ್ಲರಿಗೂ (ಬಿ.ಪಿಎಲ್.

ಮತ್ತು ಎ.ಪಿ.ಎಲ್. ಕುಟುಂಬಗಳಿಗೆ) ಉಚಿತ ಆರೋಗ್ಯ ಸೇವೆ ಒದಗಿಸುವ ಮೂಲಕ Tertiary ಖಾಯಿಲೆಗಳಿಗೆ ಸಂಬಂಧಿಸಿದಂತೆ Universal Health Coverage ಸಾಧಿಸಿದ ಏಕೈಕ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ರಾಜೀವ ಆರೋಗ್ಯ ಶ್ರೀ ಯೋಜನೆಯ ಸೌಲಭ್ಯವನ್ನು ಪಡೆಯಲು ಫಲಾನುಭವಿಯು:

1. ಎ.ಪಿ.ಎಲ್. ಪಡೀತರ ಚೀಟಿ ಹೊಂದಿರಬೇಕು.
2. ಪ್ಯಾಕೇಜ್ ದರದ ಶೇ.10 ರಷ್ಟನ್ನು ಸಹ ಪಾವತಿ ಮಾಡಲು ಸಿದ್ಧರಿರಬೇಕು.
3. ಪ್ಯಾಕೇಜ್ ದರದಡಿ ಸಿಗುವ ವೈದ್ಯಕೀಯ ಸೌಲಭ್ಯಗಳನ್ನು ಹೊರತುಪಡಿಸಿ ಹೆಚ್ಚುವರಿ ಸೌಲಭ್ಯಗಳು ಬೇಕಾದಲ್ಲಿ ಅದಕ್ಕೆ ತಗಲುವ ವೆಚ್ಚವನ್ನು ಭರಿಸಬೇಕು.

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಮೂಲ ವಸತಿ ಸೌಲಭ್ಯ

506(308); ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಧಾರವಾಡ ಕೇಂದ್ರೀಯ)

ಅ) ರಾಜ್ಯದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಶಾಲೆಗಳು ಪ್ರಾರಂಭಗೊಂಡಿದ್ದು ಯಾವಾಗ;

ಇ) ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮಾಗೂ ಶಿಕ್ಷಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಶಾಲೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವಂತಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಉ) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ; ಇದ್ದಲ್ಲಿ ಕಾರಣಗಳೇನು?